## ನುಡಿನೋಟ

ತೆಂಕಣ ಕಣಿವೆಯ ಕಾಡಿನಲ್ಲಿ
ಒಂದು ಗಿಣಿ ನಮ್ಮ ಗುಟ್ಟನ್ನು
ಸಾರಿ ಸಾರಿ ಅರುಹುತ್ತಿತ್ತು
ಜನನಿಬಿಡ ಮಾರುಕಟ್ಟೆಯಲ್ಲಿ...
ಎನ್ನುವಾಗ ಗಿಣಿಯ ಮೇಲೆ ಅವನಿಗೆ ಸಿಟ್ಟಿದ್ದರೂ ಸತ್ಯವನ್ನು ತಿರಸ್ಕರಿಸುವುದಿಲ್ಲ.

ಒಮ್ಮೊಮ್ಮೆ ರಾತ್ರಿಯನ್ನು ಒಂಟಿ ಕಳೆಯಲೇಬೇಕಾಗಿ ಬಂದರೆ ಅವನ ಮನಸ್ಸು ಚಡಪಡಿಸುತ್ತದೆ.

ಕನಸಿನಲ್ಲಿ ಕಾಡುವ
ನನ್ನ ಪ್ರಿಯತಮೆ
ಕಣ್ಮರೆಯಾಗಿರುವಳೀಗ
ಅವಳ ಅನ್ವೇಷಣೆಗೆ
ಭವಿಷ್ಯವಾಣಿಯ ಮೊರೆಹೋಗಲೆ? ಎಂದು ಕೊರಗುತ್ತಾನೆ.

ಕೊನೆಯೇ ಇಲ್ಲವೇನೋ ಎಂಬಂತಹ ದುರ್ದಮ್ಯ ಭೌಗೋಳಿಕ ಪರಿಸರವಿರುವ ಧಾರ್ಮಿಕ ಸಾಮ್ರಾಜ್ಯಕ್ಕೆ ಅವನು ನಾಯಕನಾಗಿದ್ದ. ಆದರದು ಅವನ ಕನಸಾಗಿರಲಿಲ್ಲ. ದೊಡ್ಡ ಕನಸುಗಳೇನೂ ಇಲ್ಲದ ಸಾಧಾರಣ ಸಂಸಾರಿಯ ಎಲ್ಲ ಸುಖ ಬೇಕಿತ್ತು ಅವನಿಗೆ. ದುರಾದೃಷ್ಟ, ಅವನು

ಲಾಮಾನ ಜೀವನ ಕುರಿತ ನೃತ್ಯ ನಾಟಕದ ದೃಶ್ಯ

